## ಕೊಂಡ್ಲಹಳ್ಳಿಯ ಸಾಧಕರು

ಕೆಲವು ಖಾಸಗಿ ಟಿವಿ ವಾಹಿನಿಯವರು ಒಳ್ಳೆಯ ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ. ಇತ್ತೀಚೆಗೆ ಜನಶ್ರೀ ಟಿವಿ ವಾಹಿನಿಯವರು ಒಬ್ಬ ಒಳ್ಳೆಯ ಸಾಧಕರ ಬಗ್ಗೆ ಪರಿಚಯ ಮಾಡಿಕೊಟ್ಟರು. ಅವರೇ ಡಾ. ಕೆ.ನಾಗರಾಜ ಮತ್ತು ಅವರ ಪುತ್ರ ವಿಜಯ್. ಇವರು ಮೊಳಕಾಲ್ಮುರು ತಾಲ್ಲೂಕಿನ ಕೊಂಡ್ಲಹಳ್ಳಿಯಲ್ಲಿ ಎಂ.ಆರ್.ಟಿ. ನೇತ್ರ ಚಿಕಿತ್ಸೆಯನ್ನು ಉಚಿತವಾಗಿ ನೀಡುತ್ತಾರೆ. ಸುಸಜ್ಜಿತ ಆಸ್ಪತ್ರೆಯನ್ನು ಕೊಂಡ್ಲಹಳ್ಳಿಯಲ್ಲಿ ಸ್ಥಾಪಿಸಿದ್ದಾರೆ. ಇದು ಬಡವರ ಆಶಾಕಿರಣ. ಪ್ರತಿ ಶನಿವಾರ ಮತ್ತು ಭಾನುವಾರ ನೇತ್ರ ಪರೀಕ್ಷೆ ನಂತರ ನೇತ್ರ ಚಿಕಿತ್ಸೆ ಸಂಪೂರ್ಣ ಉಚಿತ. ನೇತ್ರ ಚಿಕಿತ್ಸೆಗೆ ಬಂದವರಿಗೆ ಉಚಿತ ಉಪಾಹಾರ ಮತ್ತು ಊಟದ ವ್ಯವಸ್ಥೆ ಇದೆ.

ಈ ವೈದ್ಯರು ಸಾವಿರಾರು ಮಂದಿಯ ಕಣ್ಣಿಗೆ ಬೆಳಕನ್ನು ನೀಡಿದ್ದಾರೆ. ಹಲವಾರು ಕಡೆ ನೇತ್ರ ಶಿಬಿರಗಳನ್ನು ಏರ್ಪಾಡು ಮಾಡುತ್ತಾರೆ. ಇವರ ಹೆಸರು ಬಹಳಷ್ಟು ಜನರಿಗೆ ತಿಳಿಯದೆ ಇರಬಹುದು. ಆದರೆ ಕೊಂಡ್ಲಹಳ್ಳಿ ಡಾಕ್ಟರ್ ಎಂಬ ಹೆಸರಿನಿಂದಲೇ ಜನಪ್ರಿಯರಾಗಿದ್ದಾರೆ. ನಾನು ಅವರನ್ನು ಬಹಳ ದಿನಗಳಿಂದಲೂ ಬಲ್ಲೆ. ಸುಮಾರು 30 ವರ್ಷಗಳಿಂದಲೂ ನೇತ್ರ ಚಿಕಿತ್ಸೆ ಮಾಡುತ್ತಾ ಬಂದಿದ್ದಾರೆ. ಇಂತಹ ಒಳ್ಳೆಯ ಸಾಧಕರನ್ನು ಪರಿಚಯಿಸಿದ ಜನಶ್ರೀಗೆ ಧನ್ಯವಾದಗಳು.

-ಮೊಳಕಾಲ್ಮುರು ಸುರೇಶ್, ಬಳ್ಳಾರಿ

## ನಿಮ್ಮ ಮನೆಯಂಗಳದಲ್ಲಿ... ಎಂದು?

ಹಿಂದಿಗಿಂತಲೂ 'ಚಂದನ'ದಲ್ಲಿ ಕೆಲವು ಒಳ್ಳೆಯ ಕಾರ್ಯಕ್ರಮಗಳು ಮೂಡಿಬರುತ್ತಿವೆ. ಅದರಲ್ಲೂ 'ಮಧುರ, ಮಧುರ...' ಕಾರ್ಯಕ್ರಮ ಎಲ್ಲರ ಮೆಚ್ಚುಗೆ ಗಳಿಸಿದೆ. ಆದರೆ ಸುಮಾರು ಒಂದು ವರ್ಷದಿಂದೀಚೆಗೆ, ಹಳೆಯ ಕಾರ್ಯಕ್ರಮಗಳಷ್ಟೇ ಪುನಃ ಪುನಃ ಪ್ರಸಾರವಾಗುತ್ತಿವೆ. ಅಷ್ಟಲ್ಲದೇ 'ನಿಮ್ಮ ಮನೆಯಂಗಳದಲ್ಲಿ ನಮ್ಮ ಚಂದನ' ಎಂಬ ಕಾರ್ಯಕ್ರಮದ ಬಗ್ಗೆ ಪ್ರಚಾರ ಮಾತ್ರ ಮುಂದುವರಿದಿದೆ. ನನಗೆ ತಿಳಿದಂತೆ ಈ ಕಾರ್ಯಕ್ರಮದ ಬಗ್ಗೆ ಇನ್ನೂ ನಿರ್ದಿಷ್ಟ ರೂಪರೇಷೆ ಸಿದ್ಧವಾಗಿಲ್ಲ. ಈ ಕಾರ್ಯಕ್ರಮದ ಪ್ರಕಾರ, 'ಚಂದನ' ತಂಡದವರು ವೀಕ್ಷಕರ ಮನೆಗೆ ಭೇಟಿ ಮಾಡಿ, ಅವರ ಅನಿಸಿಕೆಗಳನ್ನು ಪಡೆದು, ಚರ್ಚಿಸಬೇಕು. ಹಲವು ವೀಕ್ಷಕರು ಇದಕ್ಕಾಗಿ ಕಾಯುತ್ತಿದ್ದಾರೆ. 'ಚಂದನ' ಆಡಳಿತ ಮಂಡಳಿ ಈ ಬಗ್ಗೆ ಇತ್ತೀಚಿನ ಬೆಳವಣಿಗೆ ತಿಳಿಸಿದರೆ ಸಂತಸ, ಸಮಾಧಾನವಾದೀತು.

-ಶ್ರೀನಾಥ್ ಕೊನೇಟಿ, ಬೆಂಗಳೂರು

ವಾರದ ಪತ್ರ

## ಮೌಢ್ಯದ ವೈಭವೀಕರಣ

ಮೂಢನಂಬಿಕೆಗಳ ವಿರುದ್ಧ ಕಾನೂನು ಸಮರ ಸಾರುತ್ತಿರುವ ಈ ಕಾಲದಲ್ಲಿ ಈಗಾಗಲೇ ಇರುವ ಢೋಂಗಿ ಜ್ಯೋತಿಷಿಗಳು, ವಾಮಾಚಾರಿಗಳೊಡನೆ ಟಿವಿ ಧಾರಾವಾಹಿಗಳು ಪೈಪೋಟಿ ನಡೆಸುತ್ತಾ ಮೂಢ ನಂಬಿಕೆಗಳನ್ನು ಹುಟ್ಟುಹಾಕುವ ಕಾರ್ಯಕ್ರಮಕ್ಕೆ ಕಂಕಣ ತೊಟ್ಟಿವೆ.

ಕೆಲವು ಧಾರಾವಾಹಿಗಳಲ್ಲಿ ಮೂಢನಂಬಿಕೆ, ಮೌಢ್ಯದ ಆಚರಣೆಗಳೇ ಬಂಡವಾಳವಾಗಿವೆ. ಬಾಲ್ಯ ವಿವಾಹದ ವಿರುದ್ಧದ ಧಾರಾವಾಹಿಯೆಂದು ಬಿಂಬಿಸಲಾದ ಪುಟ್ಟಗೌರಿ ಮದುವೆ ಇದಕ್ಕೊಂದು ಉದಾಹರಣೆ. ಮುತ್ತೈದೆ ಕುಂಕುಮ ಚೆಲ್ಲಿದ ತಕ್ಷಣ ಅವಳ ಗಂಡನಿಗೆ ಆಕ್ಸಿಡೆಂಟ್ ಆಗುವುದು, ಗಂಡನ ಮಗಳ ಒಳಿತಿಗೆಂದು ಉರುಳು ಸೇವೆ ಮಾಡುವುದು, ಗಂಡನಿಂದ ದೂರಾಗಬಾರದೆಂದು ಪೂಜೆಯ ಕುಂಕುಮ ದಿನಾ ಹಚ್ಚುವುದು, ದೇವರ ಸೇವೆ ಮಾಡಿದ ತಕ್ಷಣ ಗಂಡನಿಗಿದ್ದ ಕಂಟಕ ದೂರವಾಗುವುದು... ಹೀಗೆ ಅನೇಕ ಮೌಢ್ಯಾಚರಣೆಗಳು ತುಂಬಿವೆ.

ಎಲ್ಲಕ್ಕಿಂತಾ ವಿಚಿತ್ರವೆಂದರೆ ಇಬ್ಬರು ಹುಡುಗಿಯರ ಸರಗಳು ಬೆಸೆದುಕೊಂಡರೆ ಅವರು ಸವತಿಯರಾಗುತ್ತಾರೆಂಬುದು. ಇದೇ ರೀತಿ ಅಕ್ಕ, ಲಕ್ಷ್ಮೀ ಬಾರಮ್ಮ ಧಾರಾವಾಹಿಗಳು ಸಹ ಇಂತಹ ಮಾಟ ಮಂತ್ರ, ಮೂಢಾಚರಣೆಗಳನ್ನೇ ಎತ್ತಿ ಸಾರುತ್ತಿವೆ. ಲಚ್ಚಿಯು ಗೌರಿ ಪೂಜೆ ಮಾಡಿ ಸೇವೆ ಮಾಡಿದ ತಕ್ಷಣ ಗಂಡನ ಕಂಟಕ ದೂರವಾಗುತ್ತದೆ. ದೇವರ ಕುಂಕುಮ ಇಟ್ಟ ಕೂಡಲೇ ಕೋಮಾದಲ್ಲಿರುವ ದೇವಕಿ ಕಣ್ಣುಬಿಡುತ್ತಾಳೆ. ದೇವರ ಸನ್ನಿಧಿಗೆ ಹೋದರೆ ಒಳ್ಳೆಯದೆಂದು ಕೋಮಾದಲ್ಲಿರುವವಳನ್ನು ಡಾಕ್ಟರ್ ಕಣ್ಣು ತಪ್ಪಿಸಿ ಕರೆದೊಯ್ಯುತ್ತಾರೆ. ಮಗು ತನ್ನವಳಾಗಲೆಂದು ತಂದೆಯೇ ವಾಮಾಚಾರಿಗಳ ಮೊರೆ ಹೋಗುತ್ತಾನೆ. ಇವೆಲ್ಲಾ 'ಅಕ್ಕ'ದ ಸ್ಯಾಂಪಲ್‌ಗಳು. ಅಷ್ಟಲ್ಲದೆ ಜಾತಕ ನೋಡಿ ಭವಿಷ್ಯ ನುಡಿಯುವ ಜ್ಯೋತಿಷಿಗಳು. ಇದನ್ನು ನೋಡುವ ಮುಗ್ಧರು ಇನ್ನೂ ಮೌಢ್ಯಕ್ಕೆ ಬಲಿಯಾಗುತ್ತಾರೆ. ಇಂದಿನ ನಾಗರಿಕ ಜಗತ್ತಿನಲ್ಲಿ ಮೂಢನಂಬಿಕೆಗಳಿಂದ ಹೊರ ಬಂದು ಉತ್ತಮ ಮೌಲ್ಯ ಬೆಳೆಸುವ ಧಾರಾವಾಹಿಗಳನ್ನು ಮಾಡುವ ಯೋಚನೆ ನಮ್ಮ ವಾಹಿನಿ ಹಾಗೂ ಧಾರಾವಾಹಿ ನಿರ್ದೇಶಕರಿಗೇಕಿಲ್ಲ?

-ಎನ್. ಗೀತಾ, ಬೆಂಗಳೂರು

## ಖುಷಿ ಕೊಡದ 'ಬಿಗ್ ಬಾಸ್'

ಸುವರ್ಣ ಚಾನೆಲ್‌ನಲ್ಲಿ ಪ್ರಸಾರಗೊಳ್ಳುತ್ತಿರುವ 'ಬಿಗ್ ಬಾಸ್' ರಿಯಾಲಿಟಿ ಶೋ, ಇದಕ್ಕೆ ಮುನ್ನ ಈಟಿವಿಯಲ್ಲಿ ಬಂದಿರುವಷ್ಟು ಚೆನ್ನಾಗಿ ಮೂಡಿಬರುತ್ತಿಲ್ಲ. ಈಟಿವಿಯಲ್ಲಿ ಪ್ರದೀಪ್ ಅವರು ಬ್ಯಾಕ್‌ಗ್ರೌಂಡ್ ವಾಯ್ಸ್ ಬಹಳ ಚೆನ್ನಾಗಿ ನೀಡುತ್ತಿದ್ದರು. ಅದನ್ನು ಕೇಳಲು ಖುಷಿ ಆಗುತ್ತಿತ್ತು. ಆದರೆ ಈಗ ಸುವರ್ಣ ವಾಹಿನಿಯಲ್ಲಿ ನೀಡುವ ವಾಯ್ಸ್ ಓವರ್ ಅಷ್ಟೊಂದು ಖುಷಿ ಕೊಡುತ್ತಿಲ್ಲ. 'ಬಿಗ್ ಬಾಸ್'ನಲ್ಲಿ ಹುಡುಗಿಯರು ಮೇಕಪ್ ಮಾಡುವುದೇ ಹೆಚ್ಚಾಗಿದೆ. ದಿನೇ ದಿನೇ ಕಂಟೆಸ್ಟೆಂಟ್‌ಗಳ ಜಗಳ ಹೆಚ್ಚಾಗುತ್ತಿದೆ. ಅದರ ಮೇಲೆ ನಿಯಂತ್ರಣ ಇದ್ದರೆ ಒಳ್ಳೆಯದು.

ಸೃಜನ್ ಲೋಕೇಶ್ ಮಾತ್ರ ಜವಾಬ್ದಾರಿಯುತವಾಗಿ ವರ್ತಿಸುತ್ತಿದ್ದಾರೆ. ರಿಯಾಲಿಟಿ ಶೋ ನಡೆಸುವವರು ಪ್ರೇಕ್ಷಕರ ಬೇಡಿಕೆಗಳನ್ನೂ ಅರ್ಥ ಮಾಡಿಕೊಳ್ಳಬೇಕು.

-ಅಪೂರ್ವ ಕೆ. ಹೆಗಡೆ, ಎರ್ಮಟ್ಟೊಡಿ, ಬೆಳ್ತಂಗಡಿ

## ಹಾಸ್ಯ ಕಾರ್ಯಕ್ರಮ ನೀಡಿ

ಬೆಳಿಗ್ಗೆ ಎದ್ದು ಟಿವಿ ಆನ್ ಮಾಡಿ, ಯಾವ ಚಾನೆಲ್ ತಿರುವಿದರೂ ಬರೀ ಜ್ಯೋತಿಷಿಗಳ ಕಾಟ. ಸಂಜೆಯಾಯಿತೆಂದರೆ ಎಲ್ಲಾ ಚಾನೆಲ್‌ಗಳಲ್ಲೂ ಧಾರಾವಾಹಿಗಳದೇ ಅಬ್ಬರ! ಇವುಗಳ ನಡುವೆ ಕಾರ್ಯಕ್ರಮಕ್ಕಿಂತ ಹೆಚ್ಚು ಹೊತ್ತು ದಾಳಿಯಿಡುವ ಜಾಹಿರಾತುಗಳು! ಸ್ವಲ್ಪ ರಿಲ್ಯಾಕ್ಸ್ ಆಗಲು ಧಾರಾವಾಹಿ ಬಿಟ್ಟು ಬೇರೆ ಬೇರೆ (ಹಾಸ್ಯ) ಕಾರ್ಯಕ್ರಮಗಳಿಲ್ಲವೆ?

-ಓಂ ಚನ್ನೇಶ್ ಅರಬಿಳಚಿ ಕ್ಯಾಂಪ್, ಭದ್ರಾವತಿ

## 'ಮಹಾ ಪರ್ವ'ದಲ್ಲಿ ಗೌರಿ ಮದುವೆ

ಈಟಿವಿಯ 'ಮಹಾ ಪರ್ವ'ದಲ್ಲಿ ಗೌರಿ ಮತ್ತು ರವಿಶಂಕರರ ವಾದ, ಜಗಳ, ಮತ್ತೆ ಒಂದಾಗುವ ದೃಶ್ಯಗಳು ಮನಸ್ಸಿಗೆ ಮುದ ನೀಡುತ್ತವೆ. ಇವರಿಬ್ಬರ ವಿವಾಹವಾಗಬೇಕು. ಒಂದಾದ ಮನಸ್ಸನ್ನು ಬಿಡುಗಡೆ ಮಾಡಬಾರದು. ಆದರೆ ಚಿಂತಾದ್ರಿಯ ಮನಸ್ಸು ಗೌರಿ ಕಡೆ ಇದೆ. ಇವರ ಪ್ರೇಮಾಂಕುರವನ್ನು ಇಲ್ಲಿಯೇ ಕತ್ತರಿಸಬೇಕು ಎನ್ನುತ್ತಾರೆ. ಅವರ ಚಲನವಲನ ನೋಡಲು ಆಳನ್ನು ಕಳಿಸುತ್ತಾರೆ. ಕತೆ ಈಗ ಬಹಳ ಚನ್ನಾಗಿ ಬರುತ್ತಿದೆ. ಕುತೂಹಲವಿದೆ. ಮುಂದೆ ಏನಾಗುತ್ತದೋ ನೋಡೋಣ.

-ರುಕ್ಮಿಣಿ ಕೃ. ದೇಶಪಾಂಡೆ, ಗೋಕಾಕ

## ತರ್ಕವಿಲ್ಲದ 'ಚಿತ್ರಲೇಖ'

ಈಟಿವಿ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಧಾರಾವಾಹಿ 'ಚಿತ್ರಲೇಖ'ದಲ್ಲಿ ನ್ಯಾಯವಾಗಲೀ, ನಂಬಲರ್ಹವಾದದ್ದಾಗಲೀ, ತರ್ಕವಾಗಲೀ ಏನೂ ಇಲ್ಲದೆ ಇರುವುದು ಅಪಹಾಸ್ಯಕ್ಕೀಡು ಮಾಡಿದೆ. ಈ ಧಾರಾವಾಹಿಯ ನಿರ್ಮಾಪಕರಾಗಲೀ, ನಿರ್ದೇಶಕರಾಗಲೀ, ಈಟಿವಿ ವಾಹಿನಿಯವರಾಗಲೀ ಪ್ರೇಕ್ಷಕರನ್ನು ಮೂರ್ಖರನ್ನಾಗಿಸಲು ಹೋಗಿ, ತಾವೇ ಮೂರ್ಖರಾಗುತ್ತಿರುವುದು ಅವರ ಗಮನಕ್ಕೇ ಬಂದಿಲ್ಲ. ಇನ್ನಾದರೂ ಈ ಧಾರಾವಾಹಿಗೆ 'ಇತಿಶ್ರೀ' ಹಾಡಿದರೆ, ಪ್ರೇಕ್ಷಕರಿಗೆ ಇನ್ನೊಂದು ಉತ್ತಮ ಧಾರಾವಾಹಿ ವೀಕ್ಷಿಸಲು ಅನುವು ಮಾಡಿಕೊಟ್ಟಂತಾಗುತ್ತದೆ.

-ಎಂ.ಆರ್. ಮುಕುಂದ, ಬೆಂಗಳೂರು